# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ*
# *ನ್ಯಾಯಾಲಯ, ಮೈಸೂರು*

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಎಂ.ಡಿ. ಶಿವರಾಜು | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ ಹೆಸರು** | ಃ ಲೇಟ್. ಪಟೇಲ್ ದೇವಣ್ಣ | | **20.02.2020** |
| **ವಯಸ್ಸು** | ಃ 63 ವರ್ಷ | | |
| **ವೃತ್ತಿ** | ಃ ನಿವೃತ ಸಹಾಯಕ ಆರಕ್ಷಕ ಉಪನಿರೀಕ್ಷಕರು | **ಪ್ರಾ.ಸಾ.** | ಃ 18 |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ 47 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2012* ಡಿಸೆಂಬರ್ ರಿಂದ *2017* ಮಾರ್ಚ ವರಗೆ ಸಿ.ಸಿ.ಬಿ, ಘಟಕದಲ್ಲಿ ಸಹಾಯಕ ಆರಕ್ಷಕ ಉಪನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ *12.08.2016* ರಂದು ಉದಯಗಿರಿ ಪೊಲೀಸ್ ಠಾಣೆ ಮೊಕದ್ದಮೆ *59/2016* ರಲ್ಲಿ ತಲೆ ಮರೆಸಿಕೊಂಡ ಆರೋಪಿಯನ್ನು ಪತ್ತೇಮಾಡಲು ನನಗೆ ನೇಮಕ ಮಾಡಿದ್ದರು. ಅದರಂತೆ ನಾನು ಆ ದಿನ ಬೆಳಗ್ಗೆ *8.00* ಗಂಟೆಗೆ ಪಿರಿಯಾಪಟ್ಟಣಕ್ಕೆ ಹೋಗಿ ಈ ಕೇಸಿನಲ್ಲಿ ಮರೆಸಿಕೊಂಡ ಆರೋಪಿ ಪೈಕಿ ಅಯೂಬ್ ಖಾನ್ ಈತನು ಪಿರಿಯಾಪಟ್ಟಣದಲ್ಲಿ ಓಡಾಡುತ್ತಿದ್ದಾನೆ ಎಂಬ ಮಾಹಿತಿಯೊಂದಿಗೆ ನಾನು ಪಿರಿಯಾಪಟ್ಟಣಕ್ಕೆ ಹೋಗಿ ಅಲ್ಲಿ ಮಾಹಿತಿಯನ್ನು ಸಂಗ್ರಹಿಸಿದಾಗ ಪಿರಿಯಾಪಟ್ಟಣದ ಬಸ್ ನಿಲ್ದಾಣ ಮುಂಭಾಗದ ಆಟೋ ಸ್ಟಾಂಡ್ ಹತ್ತಿರ ಇರುವುದಾಗಿ ತಿಳಿದು ಬಂದಿದ್ದು ನಾನು ಬಸ್ ನಿಲ್ದಾಣದ ಹತ್ತಿರ ಇರುವ ಆರೋ ನಿಲ್ದಾಣಕ್ಕೆ ಮುಂಜಾನೆ *9.45* ಗಂಟೆಗೆ ಹೋಗಿ ಆರೋಪಿತ ಅಯೂಬ್ ಖಾನ್ ಈತನನ್ನು ವಶಕ್ಕೆ ತೆಗೆದುಕೊಂಡು ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ತನ್ನ ಹೆಸರು ಅಯೂಬ್ ಖಾನ್ ಅಲಿಯಾಸ್ ಅಯೂಬ್, ತಂದೆ ಹೆಸರು ಇಲಿಯಾಸ್, ಕಲ್ಯಾಣ ಗಿರಿ ವಾಸಿ, ಮೈಸೂರು ಎಂದು ತಿಳಿಸಿದ್ದು, ವಿಚಾರಣೆಯ ಸಂದರ್ಭದಲ್ಲಿ ತಲೆಮರೆಸಿಕೊಂಡ ಆರೋಪಿ ಈತನೇ ಎಂದು ಖಚಿತಪಡಿಸಿಕೊಂಡು ಆತನನ್ನು ಹಿಡಿದುಕೊಂಡು ಬಂದು ಎ.ಸಿ.ಪಿ.

ಸಿ.ಸಿ.ಬಿ. ಇವರ ಮುಂದೆ ಹಾಜರುಪಡಿಸಿ ಇದರ ಬಗ್ಗೆ ವರದಿಯನ್ನು ನೀಡಿರುತ್ತೇನೆ, ನನ್ನ ಜೊತೆ ಆ ದಿವಸ ಹೆಚ್.ಸಿ.*98* ಮತ್ತು ಪಿ.ಸಿ.*879* ಮತ್ತು ಪಿ.ಸಿ.*1012* ಇವರುಗಳು ಕೂಡ ನನ್ನ ಜೊತೆ ಆರೋಪಿತನ ಪತ್ತೇಗಾಗಿ ಬಂದಿದ್ದರು.

ದಿನಾಂಕಃ ***15.08.2016*** ರಂದು ಇದೇ ಮೊಕದ್ದಮೆಯಲ್ಲಿ ತಲೆ ಮರೆಸಿಕೊಂಡಂತಹ ಆರೋಪಿ ಸೈಯದ್ ಅಮೀನ್ ಈತನ ಪತ್ತೇಗಾಗಿ ರಾಜೀವ್ ನಗರದಲ್ಲಿ ಗಸ್ತು ಮಾಡುತ್ತಿದ್ದಾಗ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿಯೊಂದಿಗೆ ಸೈಯದ್ ಅಮೀನ್ ರಾಜೀವ್ ನಗರದ *2* ನೇ ಹಂತ, ಬಾಬಾ ಮೆಡಿಕಲ್ ಮುಂದೆ ನಿಂತಿರುವುದಾಗಿ ಬಂದ ಖಚಿತ ಮಾಹಿತಿಯೊಂದಿಗೆ ನಾವುಗಳನ್ನು ಸದರಿ ಸ್ಥಳಕ್ಕೆ ಹೋಗಿ ಸೈಯದ್ ಅಮೀನ್ ಈತನನ್ನು ವಶಕ್ಕೆ ತೆಗೆದುಕೊಂಡು ಆತನ ಹೆಸರು ವಿಳಾಸ ವಿಚಾರಿಸಲಾಗಿ ಆತನ ಹೆಸರು ಸೈಯದ್ ಅಮೀನ್ ತಂದೆಯ ಹೆಸರು ಸೈಯದ್ ಮುಶ್ತಾಕ್, *28* ವರ್ಷ, ರಾಜೀವ್ ನಗರ *10* ನೇ ಅಡ್ಡ ರಸ್ತೆ ಎಂದು ತಿಳಿಸಿದ್ದರಿಂದ ಆತನನ್ನು ಈ ಕೇಸಿಗೆ ಬೇಕಾದಂತಹ ಆರೋಪಿ ಎಂದು ತಿಳಿದು ಆತನನ್ನು ವಶಕ್ಕೆ ತೆಗೆದುಕೂಂಡು ಆತನನ್ನು ಎ.ಸಿ.ಪಿ. ಸಿ.ಸಿ.ಬಿ. ಕಚೇರಿಯ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತೇನೆ.

ದಿನಾಂಕಃ ***19.08.2016*** ರಂದು ಇದೇ ಮೊಕದ್ದಮೆಯಲ್ಲಿ ಮತ್ತೊಬ್ಬ ಆರೋಪಿ ತಲೆ ಮರೆಸಿಕೊಂಡ ಮಹಮ್ಮದ್ ಹಮೀದ್ ಎಂಬುವವನು ಹುಣಸೂರಿನ ಅಕ್ಕ-ಪಕ್ಕ ಗ್ರಾಮದಲ್ಲಿ ತಲೆ ಮರೆಸಿಕೊಂಡು ಇರುವುದಾಗಿ ಮಾಹಿತಿ ಬಂದ ಮೇರೆಗೆ ನಾನು ಮತ್ತು ನಮ್ಮ ಸಿಬ್ಬಂದಿಯವರು ಖಾಸಗಿ ವಾಹನದಲ್ಲಿ ಹುಣಸೂರಿಗೆ ಹೋಗಿ ಹುಣಸೂರಿನಲ್ಲಿ ಮಾಹಿತಿ ಸಂಗ್ರಹಿಸಿ ಹುಣಸೂರು ತಾಲ್ಲೂಕು ಹನಗೋಡು ಹೋಬಳಿ, ಭರತವಾಡಿ ಎಂಬ ಗ್ರಾಮದಲ್ಲಿ ಅವರ ಸಂಬಂಧಿಕರ ಮನೆಯಲ್ಲಿರುವುದಾಗಿ ಮಾಹಿತಿ ಬಂದ ಮೇರೆಗೆ ಸಂಜೆ *6.00* ಗಂಟೆಗೆ ಭರತವಾಡಿ ಗ್ರಾಮಕ್ಕೆ ಹೋಗಿ ಅಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಆತನ ಸಂಬಂಧಿಕರ ಮನೆಯ ಹಿಂಭಾಗ ಬೇಲಿಯಲ್ಲಿ ಅವಿತು ಕುಳಿತುಕೊಂಡವನನ್ನು ವಶಕ್ಕೆ ತೆಗೆದುಕೊಂಡು ಅವರ ಹೆಸರು ವಿಳಾಸ ವಿಚಾರಿಸಲಾಗಿ ಮಹಮ್ಮದ್ ಹಮೀದ್ ಅಲಿಯಾಸ್ ಹಮೀದ್ , ತಂದೆಯ ಹೆಸರು

ಮೆಹಬೂಬ್ ಖಾನ್, *28* ವರ್ಷ, ಗೌಸಿಯಾ ನಗರ ಎಂದು ತಿಳಿಸಿರುತ್ತಾನೆ. ಆತನ ಈ ಕೇಸಿನಲ್ಲಿ ತಲೆ ಮರೆಸಿಕೊಂಡ ಆರೋಪಿಯಾಗಿದ್ದರಿಂದ ಆತನನ್ನು ವಶಕ್ಕೆ ತೆಗೆದುಕೂಂಡು ಆತನನ್ನು ಎ.ಸಿ.ಪಿ. ಸಿ.ಸಿ.ಬಿ. ಕಚೇರಿಯ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತೇನೆ. ಆಗ ಸಮಯ ರಾತ್ರಿ *8.30* ಗಂಟೆ ಆಗಿತ್ತು.

ದಿನಾಂಕಃ *01.09.2016* ರಂದು ಇದೇ ಮೊಕದ್ದಮೆಯಲ್ಲಿ ಮತ್ತೊಬ್ಬ ಆರೋಪಿ ತಲೆ ಮರೆಸಿಕೊಂಡ ಸೈಯದ್ ಮುಹಿಬ್ ಎಂಬುವವನು ಎನ್,ಆರ್. ಮೊಹಲ್ಲಾದಲ್ಲಿ ಮುಖ್ಯ ರಸ್ತೆಯಲ್ಲಿ ಗಸ್ತುವಿನಲ್ಲಿ ಇರುವಾಗ ಬಾತ್ಮೀದಾರರಿಂದ ಮಾಹಿತಿ ಬಂದ ಮೇರೆಗೆ ನಾನು ಮತ್ತು ನಮ್ಮ ಸಿಬ್ಬಂದಿ ಪಿ.ಸಿ,*1012* ಇವರು ಎ.ಜೆ. ಬ್ಲಾಕ್ *13* ನೇ ಅಡ್ಡ ರಸ್ತೆಗೆ ಹೋಗಿ ಅಲ್ಲಿದ್ದ ಆಸಾಮಿಯನ್ನು ವಶಕ್ಕೆ ಪಡೆದುಕೊಂಡು ಅವರ ಹೆಸರು ವಿಳಾಸ ವಿಚಾರಿಸಲಾಗಿ ಸೈಯದ್ ಮುಹಿಬ್ ಅಲಿಯಾಸ್ ಮುಹಿಬ್, ತಂದೆಯ ಹೆಸರು ಸೈಯದ್ ಹಬೀಬ್, *28* ವರ್ಷ, ಎಂದು ತಿಳಿಸಿರುತ್ತಾನೆ. ಈತನ ವಿಚಾರಣೆಯಿಂದ ಆತನ ಈ ಕೇಸಿನಲ್ಲಿ ತಲೆ ಮರೆಸಿಕೊಂಡ ಆರೋಪಿಯಾಗಿದ್ದರಿಂದ ಆತನನ್ನು ವಶಕ್ಕೆ ತೆಗೆದುಕೂಂಡು ಆತನನ್ನು ಎ.ಸಿ.ಪಿ. ಸಿ.ಸಿ.ಬಿ. ಕಚೇರಿಯ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತೇನೆ. ಆಗ ಸಮಯ ರಾತ್ರಿ *7.00* ಗಂಟೆ ಆಗಿತ್ತು. ಸದರಿ ವರದಿಗಳನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.*21* ರಿಂದ ನಿ.ಪಿ.*24* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.*21(ಎ)* ರಿಂದ ನಿ.ಪಿ.*24(ಎ)* ಎಂದು ಗುರುತಿಸಲಾಯಿತು. ನಾನು ದಸ್ತಗಿರಿ ಮಾಡಿ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ ಆರೋಪಿಗಳು ಇಂದು ನ್ಯಾಯಾಲಯದ ಮುಂದೆ ಆರೋಪಿ *2* ರಿಂದ *4* ಇರುತ್ತಾರೆ. ಅದೇ ರೀತಿ ದಿನಾಂಕಃ *27.08.2016, 06.09.2016, 12.09.2016* ಮತ್ತು *03.11.2016* ರಂದು ಆರೋಪಿ *9* ಮತ್ತು *10* ಇವರು ತಲೆ ಮರೆಸಿಕೊಂಡಿದ್ದು ಅವರ ಪತ್ತೇಗಾಗಿ ನಮ್ಮನ್ನು ನೇಮಿಸಿದ್ದು ನಾವು ಅವರನ್ನು ಹುಡುಕಿದರೂ ಅವರು ಪತ್ತೇಯಾಗಿರುವುದಿಲ್ಲ ಎಂದು ವರದಿಯನ್ನು ನೀಡಿರುತ್ತೇವೆ, ಸದರಿ ವರದಿಯನ್ನು ನಿ.ಪಿ.*25* ರಿಂದ *28* ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-</u>

. ಸೈಯದ್ ಅಮೀನ್ ಈ ಕೇಸಿಗೆ ಸಂಬಂಧ ಇದ್ದಾನೆ ಅಥವಾ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಅದು ತನಿಖಾಧಿಕಾರಿಯವರಿಗೆ ಗೊತ್ತಿರುತ್ತದೆ. ಸದರಿ ವ್ಯಕ್ತಿ ಬೇರೆ ಕೇಸಿನಲ್ಲಿ ಆರೋಪಿಯಾಗಿರುತ್ತಾನೆ ಎಂದು ನನಗೆ ಗೊತ್ತಾಗಿರುತ್ತದೆ. ನಾನು *2* ರಿಂದ *4* ಆರೋಪಿತನನ್ನು ದಸ್ತಗಿರಿ ಮಾಡಿದ ಆ ಸ್ಥಳಕ್ಕೆ ಸಂಬಂಧಪಟ್ಟ ಸರಹದ್ದಿನ ಪೊಲೀಸರಿಗೆ ನಾನು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಸ್ಥಳದಲ್ಲಿ ನಾನು ಯಾವುದೇ ಬರವಣಿಗೆ ಮಾಡಿರುವುದಿಲ್ಲ. ತನಿಖಾಧಿಕಾರಿಗಳು ನನಗೆ ಆರೋಪಿತರ ಹೆಸರುಗಳನ್ನು ನನಗೆ ಹೇಳಿದ್ದರು. ಎ.ಸಿ.ಪಿ. ನಮಗೆ ಮೌಖಿಕವಾಗಿ ಡ್ಯೂಟಿ ಮಾಡಲು ಆದೇಶ ಮಾಡಿರುತ್ತಾರೆ. ನಾವು ಡ್ಯೂಟಿ ಮಾಡುವಾಗ ಒಂದು ನೋಟು ಬುಕ್ ಮೇಂಟೇನ್ ಮಾಡುತ್ತೇವೆ. ನಾನು ಆರೋಪಿತರನ್ನು ವಶಕ್ಕೆ ತೆಗೆದುಕೊಂಡಿರುವಾಗ ಸಮವಸ್ತ್ರವನ್ನು ಧರಿಸಿರಲಿಲ್ಲ. ನನಗೆ ಯಾವುದೇ ಡ್ಯೂಟಿಗೆ ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಿ.ಸಿ.ಬಿ. ಕಚೇರಿಯಲ್ಲಿ ಕುಳಿತು ವರದಿಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಕೊಟ್ಟಿರುತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವ್ಯಕ್ತಿಗಳನ್ನು ಧಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. *2* ರಿಂದ *4* ಆರೋಪಿತರಿಗೂ ಮತ್ತು ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

*ಮರು ವಿಚಾರಣೆಃ- ಇಲ್ಲ.*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*